# ಸೆಲೆಬ್ರಿಟಿ

■ ಹನಿ



## ಜೀವನದ ಪಾಠ

ಯುವರಾಜ್ ಸಿಂಗ್ ಮತ್ತೆ ಕ್ರಿಕೆಟ್ ಆಡುತ್ತಾರೆಯೆ? ಅಂತರರಾಷ್ಟ್ರೀಯ ಕ್ರಿಕೆಟ್ ಆಡಲು ಆತ ಸಮರ್ಥನಾಗಬಹುದೆ? ಆತನ ದೇಹ ಕ್ರಿಕೆಟ್‌ಗೆ ಬೇಕಾದ ಅದಮ್ಯ ಚೈತನ್ಯವನ್ನು ಶೀಘ್ರದಲ್ಲೇ ಮರಳಿ ಗಳಿಸಬಹುದೆ? ಹಾಗೆ ಚೈತನ್ಯ ಮರಳಿ ಗಳಿಸುವ ವೇಳೆಗೆ ನಮ್ಮ ಕ್ರಿಕೆಟ್ ತಂಡಕ್ಕೆ ಆತನ ಅಗತ್ಯ ಇನ್ನೂ ಉಳಿದಿರಬಹುದೆ?

–ಸದ್ಯಕ್ಕೆ ಈ ಪ್ರಶ್ನೆಗಳಿಗೆ ಯುವರಾಜ್ (ಬರ್ತ್‌ಡೇ 12–12–1981) ಬಳಿಯಲ್ಲೂ ಉತ್ತರವಿಲ್ಲ. ಆದರೆ ಹೃದಯದ ಗಡ್ಡೆಯಲ್ಲಿ ಕಂಡು ಬಂದ ಒಂದು ಸೂಕ್ಷ್ಮಾತಿಸೂಕ್ಷ್ಮ ಕ್ಯಾನ್ಸರ್ ಜೀವಕೋಶ, ಖ್ಯಾತಿಯ ಉತ್ತುಂಗದಲ್ಲಿ ಅಹಂಕಾರದ ವ್ಯಕ್ತಿತ್ವ ರೂಪಿಸಿಕೊಂಡಿದ್ದ ವ್ಯಕ್ತಿಯೊಬ್ಬನನ್ನು ವಿನಮ್ರತೆಯ ಹೊಸ್ತಿಲಲ್ಲಿ ತಂದು ನಿಲ್ಲಿಸಿದೆ ಎನ್ನುವುದಂತೂ ನಿಜ.

ಕೆಲವೇ ವರ್ಷಗಳ ಹಿಂದಿನ ಮಾತು. 'ಮೋಸ್ಟ್ ಬ್ಯಾಚುಲರ್ ಹಾಗೂ ಫ್ಲರ್ಟ್' ಎನ್ನಿಸಿಕೊಂಡಿದ್ದ ಯುವಿಯ ಟೀವಿ ಸಂದರ್ಶನ ನಡೆಯುತ್ತಿತ್ತು. ಸಿನಿಮಾ ಪತ್ರಕರ್ತೆ ಅದೇ ಪ್ರಶ್ನೆ ಕೇಳಿದಳು– 'ನಿಮ್ಮನ್ನು ಹುಡುಗಿಯರ ಷೋಕಿ ಇರುವಾತ ಎನ್ನುತ್ತಾರಲ್ಲ.. ಏನಂತೀರಿ?' ತಕ್ಷಣ ಮುಖ ಮೂತಿ ನೋಡದೆ ಯುವಿ ಉತ್ತರಿಸಿದ್ದ– 'ನಾಳೆ ಸಂಜೆ ನಿಮ್ಮ ಕಾರ್ಯಕ್ರಮವೇನು?' ಪ್ರಶ್ನೆ ಕೇಳಿದ ಆ ಹುಡುಗಿ ಭೂಮಿಗಿಳಿದು ಹೋಗಿದ್ದಳು! ಅದು ಆಗಿನ ಯುವಿ ಸ್ಟೈಲ್!

ಅದೇ ಯುವಿ, ಅಮೆರಿಕಾದಲ್ಲಿ ಮೂರೂವರೆ ತಿಂಗಳ ಕ್ಯಾನ್ಸರ್ ಚಿಕಿತ್ಸೆ ಮುಗಿಸಿ ಬಂದು ಕಳೆದ ವಾರ ಪತ್ರಕರ್ತರ ಮುಂದೆ ತಣ್ಣಗೆ ಕುಳಿತಿದ್ದ– 'ದೇವರಿಗೆ ಕೃತಜ್ಞನಾಗಿದ್ದೇನೆ– ನನ್ನ ಜೀವನವನ್ನು ಮರಳಿ ಗಳಿಸಿದ್ದಕ್ಕೆ. ಇನ್ನು ಮುಂದೆ ನನ್ನ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಬೇಕಿದೆ..'

ವಿಶ್ವಕಪ್ ಕ್ರಿಕೆಟ್ ಜಯಿಸಿದ ಭಾರತ ತಂಡಕ್ಕೆ ಈ ಪಂಜಾಬಿ ಪುತ್ತರ್ ಜೀವಾಳವಾಗಿದ್ದ. ಭಾರತ ಕಪ್ ಗೆಲ್ಲುವಲ್ಲಿ ಈತನ ಎಡಗೈ ಆಟದ ಕೊಡುಗೆ ಅತ್ಯಂತ ಮಹತ್ವದ್ದಾಗಿತ್ತು. ಕ್ರಿಕೆಟ್ ಮೈದಾನದಲ್ಲೇ ಕೆಮ್ಮುತ್ತಾ, ಕೆಲವೊಮ್ಮೆ ರಕ್ತವನ್ನೂ ಉಗುಳುತ್ತಿದ್ದ ಯುವಿ ತನ್ನ ಎಂದಿನ ಉದ್ಧಟತನದ ಶೈಲಿಯಲ್ಲಿಯೇ – 'ನಾನೊಬ್ಬ ಅಥ್ಲೀಟ್. ದಿನಕ್ಕೆ ಆರು ಗಂಟೆಗಳ ಕಾಲ ಓಡುತ್ತೇನೆ, ಇಡೀ ದಿನ ಕ್ರಿಕೆಟ್ ಆಡಿ ಫಿಟ್ ಆಗಿದ್ದೇನೆ. ನನಗೆಲ್ಲಿ ಕ್ಯಾನ್ಸರ್ ಬರಲು ಸಾಧ್ಯ?' ಎಂದೇ ಯೋಚಿಸುತ್ತಿದ್ದನಂತೆ! ಆರಂಭದ ಆರು ತಿಂಗಳ ಚಿಕಿತ್ಸೆಯಲ್ಲಿ ಅದು ಕ್ಯಾನ್ಸರ್ ಕಣ ಎನ್ನುವುದೂ ಪತ್ತೆಯಾಗಲಿಲ್ಲ. ಆದರೆ ಒಮ್ಮೆ ಅದು ಕ್ಯಾನ್ಸರ್ ಎಂದು ಗೊತ್ತಾದ ಕ್ಷಣ ಯುವಿ ಭೂಮಿಗಿಳಿದು ಹೋದದ್ದೂ ನಿಜ.

ಯುವಿಯ ಗ್ರೇಟ್‌ನೆಸ್ ಇರುವುದು ರೋಗವನ್ನು ಆತ ಎದುರಿಸಿದ ಛಾತಿಯಲ್ಲಿ. ಹಾಗೆ ನೋಡಿದರೆ ಯುವಿಗೆ ಆರಂಭದ ಹಂತದಲ್ಲೇ ರೋಗ ಪತ್ತೆಯಾಗಿತ್ತು. ಹೆಚ್ಚೆಂದರೆ ಆತ ಚಿಕಿತ್ಸೆಗೆ ಎರಡು ತಿಂಗಳಷ್ಟೇ ತಡವಾಗಿದ್ದ. 'ಹಣವೇ ಎಲ್ಲವೂ ಅಲ್ಲ. ಹಣ ಮತ್ತು ಕೀರ್ತಿ ನನ್ನಲ್ಲಿ ಯಥೇಚ್ಛವಾಗಿತ್ತು. ಆದರೆ ಆರೋಗ್ಯ ಮುಖ್ಯ. ಅದರಿಂದ ದೊರಕುವ ಸಂತೋಷ ಮುಖ್ಯ' ಎಂದಿದ್ದಾನೆ ಯುವಿ. 'ಹಿಂದೆ ಮೈದಾನದಲ್ಲಿ ಆಡುತ್ತಿದ್ದಾಗ ರನ್ ಗಳಿಸಲೇಬೇಕು, ಕ್ಯಾಚ್ ಹಿಡಿಯಲೇಬೇಕು ಎಂದು ಮನಸ್ಸಿನ ಮೇಲೆ ಅತೀವ ಒತ್ತಡ ಹೇರುತ್ತಿದ್ದೆ. ಖಂಡಿತವಾಗಿಯೂ ಮತ್ತೆ ಕ್ರಿಕೆಟ್ ಆಡುತ್ತೇನೆ– ಆದರೆ ಕಡಿಮೆ ಒತ್ತಡದೊಂದಿಗೆ' ಎಂದು ಮುಗುಳ್ನಕ್ಕಿದ್ದಾನೆ. ಕಳೆದ ಮೂರು ತಿಂಗಳಿಂದ ಯುವಿ ಟೀವಿಯಲ್ಲೂ ಕ್ರಿಕೆಟ್ ನೋಡಿಲ್ಲ– ಬದಲಿಗೆ ಆಸ್ಪತ್ರೆಯ ಹೊರಗೆ ಪಾರ್ಕಿನಲ್ಲಿ ಪ್ರತಿನಿತ್ಯ ವ್ಯಾಯಾಮ ಮಾಡುತ್ತಿದ್ದ 80 ದಾಟಿದ ವಯೋವೃದ್ಧರ ಉತ್ಸಾಹವನ್ನು ನೋಡುತ್ತಾ ಉಲ್ಲಸಿತನಾಗುತ್ತಿದ್ದನಂತೆ.

ಭೂಮಿಗಿಳಿದು ಹೋಗಿದ್ದ ಯುವಿಗೆ ಕ್ಯಾನ್ಸರ್ ಎದುರಿಸುವಲ್ಲಿ ದೃಢ ಬೆಂಬಲವಾಗಿ ನಿಂತದ್ದು ಆತನ ತಾಯಿ ಶಬನಮ್. ಕಣ್ಣಲ್ಲಿ ನೀರು ತುಂಬಿಕೊಂಡು ಯುವಿ ಅಳುತ್ತಿದ್ದರೆ, ಆಕೆ ಒಂದು ಹನಿ ಕಣ್ಣೀರೂ ಹಾಕದೆ ಗಟ್ಟಿಯಾಗಿ ನಿಂತು ಮಗನನ್ನು ಸಂತೈಸಿ ಚಿಕಿತ್ಸೆ ಎದುರಿಸುವಂತೆ ಹುರಿದುಂಬಿಸಿದ್ದಳು. ನಿಜ, ಎಲ್ಲರಿಗೂ ಶಬನಮ್‌ರಂತಹ ಅಮ್ಮ ಸಿಗುವುದಿಲ್ಲ. ಯುವಿ ಮತ್ತೆ ಭಾರತದ ಪರ ಕ್ರಿಕೆಟ್ ಆಡುವಂತಾದರೆ ಅದಕ್ಕಿಂತ ದೊಡ್ಡ ಸಾಧನೆ ಇನ್ನೊಂದಿಲ್ಲ! ಆಡದೇ ಇದ್ದರೂ ಅದೊಂದು ದೊಡ್ಡ ಸಂಗತಿಯೇನಲ್ಲ. ಕ್ರಿಕೆಟ್‌ಗಿಂತ ಜೀವನ ದೊಡ್ಡದು. 'ಕ್ಯಾನ್ಸರ್‌ನಿಂದ ಬಳಲುತ್ತಿರುವ ಇತರರಿಗೆ ಉಪಯೋಗವಾಗುವಂತೆ ಇನ್ನು ನಾನು ಬದುಕಬೇಕು' ಎಂದು ಯುವಿಗೆ ಅನ್ನಿಸಿದ ಭಾವನೆ ಇನ್ನೂ ದೊಡ್ಡದು.



## ಮದುಮಗಳ ಸಂಭ್ರಮ

ಬಾಲಿವುಡ್‌ನ ಕೋಗಿಲೆ ಕಂಠ ಸುನಿಧಿ ಚೌಹಾಣ್ ಮದುವೆಯ ಸಂಭ್ರಮದಲ್ಲಿದ್ದಾಳೆ. 28ರ ಹರೆಯದ ಈ ಸುಂದರಿಗೆ ಇದು ಎರಡನೆಯ ಮದುವೆ. 18ರ ಹರೆಯದಲ್ಲಿ 'ಪೆಹ್ಲಾ ನಶಾ' ಮ್ಯೂಸಿಕ್ ಆಲ್ಬಂಗೆ ಕೆಲಸ ಮಾಡುತ್ತಿದ್ದಾಗ ಪರಿಚಯವಾದ ಕೊರಿಯೋಗ್ರಾಫರ್ ಬಾಬ್ಬಿ ಖಾನ್ ಜತೆಗೆ ಮನೆ ಬಿಟ್ಟು ಓಡಿ ಹೋಗಿ ಮದುವೆಯಾದವಳು ಸುನಿಧಿ. ಆದರೆ ಆ ಮದುವೆ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಾಳಿಕೆ ಬರಲಿಲ್ಲ. ಮದುವೆ ಮುರಿದುಕೊಂಡು ಅನ್ನು ಕಪೂರ್–ಅರುಣಿತಾ ಮನೆಯಲ್ಲಿ ಆಶ್ರಯ ಪಡೆದಳು. ಕ್ರಮೇಣ ಪೋಷಕರ ಜತೆ ಮರುಹೊಂದಾಣಿಕೆ ಏರ್ಪಟ್ಟಿತು.

ಅದಾಗಿ 9 ವರ್ಷಗಳ ಬಳಿಕ ಇದೀಗ ಸುನಿಧಿಯ ಎರಡನೇ ಆಯ್ಕೆ ಸಂಗೀತ ನಿರ್ದೇಶಕ ಹಿತೇಶ್ ಸೋನಿಕ್. ಮದುವೆ ದಿನಾಂಕ ಇನ್ನೂ ನಿಶ್ಚಯವಾಗಿಲ್ಲವಾದರೂ, ಸುನಿಧಿಯ ಅಮ್ಮ ಈಗಾಗಲೆ 18 ಡ್ರೆಸ್‌ಗಳನ್ನು ಮದುಮಗಳಿಗಾಗಿ ಖರೀದಿಸಿ ಸುದ್ದಿ ಮಾಡಿದ್ದಾರೆ.

'ಫಾಸ್ಟ್ ನಂಬರ್ಸ್' ಎಂದು ಕರೆಯಲ್ಪಡುವ ಉಚ್ಚ ಕಂಠದ ಹಾಡುಗಳೇ ಸುನಿಧಿಗೆ ಹೆಚ್ಚು ಖ್ಯಾತಿ ತಂದುಕೊಟ್ಟಿರುವುದು. ಶೀಲಾ ಕಿ ಜವಾನಿ, ಕಜ್ರಾರೇ, ದೇಸೀ ಗರ್ಲ್ ಮುಂತಾದ ಹಾಡುಗಳು ಇದಕ್ಕೆ ಉದಾಹರಣೆ. 1996ರಲ್ಲಿ ದೂರದರ್ಶನದಲ್ಲಿ 'ಮೇರಿ ಆವಾಜ್ ಸುನೋ' ರಿಯಾಲಿಟಿ ಷೋನಲ್ಲಿ ಈಕೆ ಹಾಡಲು ಬಂದಾಗ ಜಡ್ಜ್ ಆಗಿ ಕುಳಿತಿದ್ದವಳು ಜನಪ್ರಿಯ ಗಾಯಕಿ ಅಲಕಾ ಯಾಜ್ಞಿಕ್. ಈಗ ಸ್ವತಃ ಅಲಕಾ ಮತ್ತು ಶ್ರೇಯಾ ಘೋಷಾಲ್‌ರಂತಹ ದೈತ್ಯ ಪ್ರತಿಭೆಗಳಿಗೇ ಪೈಪೋಟಿ ನೀಡುತ್ತಿರುವುದು ಕಡಿಮೆ ಸಾಧನೆಯೇನಲ್ಲ.

ನಾಲ್ಕರ ಎಳವೆಯಲ್ಲೇ ಹಾಡಲು ಶುರು ಮಾಡಿದ ಸುನಿಧಿಗೆ ಸಿನಿಮಾದಲ್ಲಿ ಹಾಡಲು ಮೊದಲ ಅವಕಾಶ ಕೊಟ್ಟದ್ದು ವಿಶಾಲ್ ಭಾರಧ್ವಾಜ್. ಆದರೆ ಅದಾಗಿ ಕೆಲವು ವರ್ಷಗಳ ಬಳಿಕ ಸಂದೀಪ್ ಚೌಟ ಸಂಗೀತ ನಿರ್ದೇಶನದಲ್ಲಿ ರಾಂಗೋಪಾಲ್ ವರ್ಮಾರ 'ಮಸ್ತ್' ಚಿತ್ರಕ್ಕೆ ನೀಡಿದ ಹಾಡುಗಳು ಹಿಟ್ ಅನ್ನಿಸಿದವು. ಅಲ್ಲಿಂದೀಚೆಗೆ ಸುನಿಧಿ ಹಿಂತಿರುಗಿ ನೋಡಿಲ್ಲ. 'ನಾನು ಸ್ಪರ್ಧೆಗೆ ಬಂದಾಗ ಐದಾರು ಜಡ್ಜ್‌ಗಳೇ ನನ್ನ ಕಂಠಸಿರಿ ನೋಡಿ ಬಹುಮಾನ ನೀಡಿದ್ದು. ಆಗ ರಿಯಾಲಿಟಿ ಷೋಗಳಲ್ಲಿ ವೋಟಿಂಗ್ ಪದ್ಧತಿ ಇರಲಿಲ್ಲ. ಇವತ್ತು ಬಹುತೇಕ ಗಾಯನದ ರಿಯಾಲಿಟಿ ಷೋಗಳಲ್ಲಿ ಹೊರಗಿನ ವೀಕ್ಷಕರು ವೋಟ್ ಮಾಡಿಯೇ ಸ್ಪರ್ಧಿಯೊಬ್ಬನನ್ನು ಗೆಲ್ಲಿಸಬಹುದು. ಇದರಿಂದ ಅವರೇಜ್ ಗಾಯಕರೂ ಪ್ರಶಸ್ತಿ ಪಡೆಯುತ್ತಾರೆ' ಎನ್ನುವುದು ಸುನಿಧಿಯ ಸ್ಪಷ್ಟನುಡಿ. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65